ನಿರ್ದೇಶಕರು ಗುಲ್ಬರ್ಗಾ ಇವರ ವರದಿ ಬಂದ ನಂತರ ಕೈಗೊಂಡಿರುವ ಕ್ರಮವೇನು?

ಇ) ಈಗಲಾದರೂ ಸಹ ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಇವರ ಅಂತಿಮ ವರದಿ ಪ್ರಕಾರ ಕ್ರಮಕೈಗೊಳ್ಳಲು ಸರ್ಕಾರಕ್ಕೆ ಎಷ್ಟು ಅವಧಿಬೇಕು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹೌದು ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರು ಅವರ ಪತ್ರ ದಿನಾಂಕ : 25-3-91ರ ಮೂಲಕ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಈ ವರದಿಯೂ ಸಹ ಅಪೂರ್ಣವಾಗಿದೆ.

ಆ) ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಅವರು ಅವರ ದಿನಾಂಕ: 25-3-91ರ ಪತ್ರದ ಮೂಲಕ ಕಳುಹಿಸಿದ್ದ ಅಂತಿಮ ವರದಿಯು ಸಹ ಅಪೂರ್ಣವಾಗಿದ್ದು ಸದರೀ ವರದಿಯನ್ನು ಕೃಷಿ ಇಲಾಖೆಯ ದಿನಾಂಕ : 25-4-91ರ ಪತ್ರದ ಮೂಲಕ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಗೆ ಹಿಂತಿರುಗಿಸಿ ಪರಿಪೂರ್ಣ ವರದಿಯನ್ನು ಕೂಡಲೇ ಸಲ್ಲಿಸಲು ಕೋರಲಾಗಿದೆ. ಈ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರೊಡನೆ ವ್ಯವಹರಿಸಲಾಗುತ್ತಿದ್ದು, ಪರಿಪೂರ್ಣ ವರದಿಯನ್ನು ಸಲ್ಲಿಸಲು ಆಗ್ರಹಿಸಲಾಗಿದೆ.

ಇ) ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಂದ ಅಂತಿಮ ಪರಿಪೂರ್ಣ ವರದಿಯು ಇನ್ನೂ ಬಂದಿರುವುದಿಲ್ಲ. ಸದರೀ ವರದಿಯು ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವನ್ಯ ಪ್ರಾಣಿಗಳಿಂದ ಬಲಿಯಾದ ಕುಟುಂಬಗಳಿಗೆ ವಿಮಾ ಸೌಲಭ್ಯ

2557 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವನ್ಯ ಪ್ರಾಣಿಗಳ ಹಾವಳಿಗೆ ತುತ್ತಾಗಿ ಮರಣ ಹೊಂದುವ ಕುಟುಂಬಗಳಿಗೆ ವಿಮಾ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಜೀವವಿಮಾ ನಿಗಮದ ಜೊತೆ ಹೊಂದಾಣಿಕೆ ಮಾಡಿ ಕೊಂಡಿದೆಯೇ?

ಆ) ಈಗ ಈ ಯೋಜನೆಯು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ?

ಇ) ಅಗತ್ಯವಾದಾಗ ವಿಮಾ ಕಂತುಗಳನ್ನು ಯಾರು ತುಂಬುವರು?

ಈ) ಈ ಯೋಜನೆಯು ಯಾವ ಯಾವ ಪ್ರಾಣಿಗಳಿಂದ ತುತ್ತಾಗಿರುವ ಜನಕ್ಕೆ ಅನ್ವಯಿಸುತ್ತದೆ.?

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಖಾಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

3555 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?